# ಚಾಂಪಿಯನ್ ಆಗ್ನೇಸಜ್ಜಿ

■ ಪ್ರವೀಣ ಕುಲಕರ್ಣಿ



ಪ್ರಪಂಚದಲ್ಲೀಗ ಅತಿ ಹೆಚ್ಚು ವಯಸ್ಸಿನ ಸೆಲೆಬ್ರಿಟಿ ಎಂದರೆ ನಿಸ್ಸಂಶಯವಾಗಿ ಹಂಗೇರಿಯ ಈ ಅಜ್ಜಿಯೇ. ಐದು ಸ್ವರ್ಣ ಪದಕಗಳೂ ಸೇರಿದಂತೆ ಒಟ್ಟಾರೆ ಹತ್ತು ಒಲಿಂಪಿಕ್ ಪದಕಗಳನ್ನು ಗೆದ್ದಿರುವ ಈ ಅಜ್ಜಿ, ಕಳೆದ ವಾರವಷ್ಟೇ ತಮ್ಮ ನೂರನೇ ಜನ್ಮದಿನವನ್ನು ಆಚರಿಸಿಕೊಂಡರು. ಅವರೇ ಜಿಮ್ನಾಸ್ಟಿಕ್ ಅಥ್ಲೀಟ್ ಆಗಿದ್ದ ಆಗ್ನೇಸ್ ಕೆಲೆಟಿ.

'ದಿ ಕ್ವೀನ್ ಆಫ್ ಜಿಮ್ನಾಸ್ಟಿಕ್ಸ್: 100 ಇಯರ್ಸ್ ಆಫ್ ಆಗ್ನೇಸ್ ಕೆಲೆಟಿ' ಕೃತಿಯನ್ನು ಅವರ ಜನ್ಮದಿನಂದೇ ಹೊರತರಲಾಗಿದೆ. ಆಗ್ನೇಸಜ್ಜಿಯ ಬಾಳ ನೆನಪಿನ ಬುತ್ತಿಯಲ್ಲಿ ಪದಕಗಳ ಹೊಳಪು ಮಾತ್ರ ತುಂಬಿಲ್ಲ; ಹತ್ಯಾಕಾಂಡದಿಂದ ಬದುಕುಳಿದ ಕ್ಷಣಗಳ ಸ್ಮರಣೆ ಕೂಡ ಬೆಚ್ಚಗೆ ಕುಳಿತಿದೆ. ಸಾಲು ದುರಂತಗಳ ಅಗ್ನಿಕುಂಡದ ನಡುವೆ ಅರಳಿದ ಹೂವು ಆಗ್ನೇಸ್. ಅವರ ಸಾಹಸ, ಸಾಧನೆಗಳ ವಿವರಗಳ ಮೇಲೆ ಕಣ್ಣಾಡಿಸಿದರೆ ರೋಚಕ ಕಾದಂಬರಿಯೊಂದನ್ನು ಓದಿದ ಅನುಭವವಾಗುತ್ತದೆ.

'ಕಳೆದಿದ್ದು ನೂರು ವರ್ಷಗಳಾದರೂ ನನ್ನ ಪಾಲಿಗೆ ಅವು 60 ವರ್ಷಗಳಂತೆ ಸಂದುಹೋಗಿವೆ' ಎನ್ನುತ್ತಾರೆ ಈ ಅಜ್ಜಿ. ತಮ್ಮ ಅಭಿನಂದನಾ ಗ್ರಂಥದ ಮೇಲೊಮ್ಮೆ ಬೆರಳಾಡಿಸುವ ಅವರು, 'ನಾನು ಜಿಮ್ನಾಸ್ಟಿಕ್ ರಾಣಿ' ಎನ್ನುವುದು ತುಂಬಾ ಉತ್ಪ್ರೇಕ್ಷಿತ ಮಾತು ಎಂದು ಯಾವುದೇ ಮುಲಾಜಿಲ್ಲದೆ ಹೇಳುತ್ತಾರೆ. 1921ರಲ್ಲಿ ಜನಿಸಿದ ಆಗ್ನೇಸ್, ದ್ವಿತೀಯ ಜಾಗತಿಕ ಸಮರದಿಂದಾಗಿ ಎರಡು ಒಲಿಂಪಿಕ್ ಕೂಟಗಳು (1940, 1944) ರದ್ದುಗೊಂಡ ಹೊರತಾಗಿಯೂ ಕ್ರೀಡೆಯಲ್ಲಿ ಮಹಾನ್ ಸಾಧನೆ ಮಾಡಿದ ಮಿನುಗುತಾರೆ.

ಯಹೂದಿ ಎನ್ನುವ ಕಾರಣಕ್ಕೆ 1941ರಲ್ಲಿ ದೇಶದ ಜಿಮ್ನಾಸ್ಟಿಕ್ ತಂಡದಿಂದ ಹೊರದೂಡಲ್ಪಟ್ಟವರು ಆಕೆ. ನಾಜಿಗಳಿಂದ ನಡೆದ ನರಮೇಧದಲ್ಲಿ ಜೀವ ಕಳೆದುಕೊಳ್ಳದಂತೆ ರಕ್ಷಣೆ ಪಡೆಯಲು ಹಂಗೇರಿಯ ಹಳ್ಳಿಯೊಂದರಲ್ಲಿ ಮನೆಗೆಲಸದ ಮಹಿಳೆಯಾಗಿ ಅಜ್ಞಾತವಾಸವನ್ನೂ ಅನುಭವಿಸಿದವರು. ಜಾಗತಿಕ ಸಮರದ ಸಮಯದಲ್ಲಿ ಆಗ್ನೇಸ್ ಅವರೊಟ್ಟಿಗೆ ಅವರ ತಾಯಿ ಹಾಗೂ ಸಹೋದರಿ ಅವರೇನೋ ಬದುಕುಳಿದರು. ಆದರೆ, ಅವರ ತಂದೆ ಹಾಗೂ ಇತರ ಸಂಬಂಧಿಗಳು ನಾಜಿ ಸೈನ್ಯದ ಭೀಕರ ಹತ್ಯಾಕಾಂಡದಲ್ಲಿ ಜೀವವನ್ನು ಕಳೆದುಕೊಂಡರು. ಹಂಗೇರಿಯ ಸುಮಾರು ಐದು ಲಕ್ಷ ಯಹೂದಿಗಳು ಆ ಸಮಯದಲ್ಲಿ ದುರಂತ ಸಾವನ್ನಪ್ಪಿದ್ದು ಚಾರಿತ್ರಿಕ ಕಪ್ಪುಚುಕ್ಕೆ.

ಯುದ್ಧ ಕೊನೆಗೊಂಡ ಬಳಿಕ ದುರಂತದ ನೆನಪುಗಳನ್ನೆಲ್ಲ ಪಕ್ಕಕ್ಕೆ ಸರಿಸಿ ಜೀವನೋತ್ಸಾಹದಿಂದ ಕ್ರೀಡೆಯಲ್ಲಿ ತೊಡಗಿಸಿಕೊಂಡ ಆಗ್ನೇಸ್, 1948ರ ಲಂಡನ್ ಒಲಿಂಪಿಕ್ ಕೂಟದಲ್ಲಿ ಸ್ಪರ್ಧಿಸಲು ಸಿದ್ಧತೆ ನಡೆಸಿದ್ದರು. ಆದರೆ, ಕೊನೆಯ ಹಂತದಲ್ಲಿ ಕಾಲಿನ ಗಾಯಕ್ಕೆ ತುತ್ತಾದ ಅವರು, ಸ್ಪರ್ಧಿಸಲಾಗದೆ ನಿರಾಸೆ ಅನುಭವಿಸಿದ್ದರು. ನಾಲ್ಕು ವರ್ಷಗಳ ಬಳಿಕ ಹೆಲ್ಸಿಂಕಿ ಕೂಟದಲ್ಲಿ (1952) ಆಗ್ನೇಸ್ ಪಾಲ್ಗೊಂಡಾಗ ಅವರಿಗಾಗಲೇ 31 ವರ್ಷ. ಆದರೆ, ಉತ್ಸಾಹ ಒಂದಿನಿತೂ ಬತ್ತಿರಲಿಲ್ಲ. ತಲಾ ಒಂದು ಸ್ವರ್ಣ, ಬೆಳ್ಳಿ ಹಾಗೂ ಎರಡು ಕಂಚಿನ ಪದಕಗಳನ್ನು ಹೆಕ್ಕಿಕೊಂಡು ಬಂದರು. ಮೆಲ್ಬರ್ನ್ ಕೂಟದಲ್ಲಿ (1956) ಆರು ಪದಕಗಳನ್ನು ಬಾಚಿಕೊಂಡ ಅವರು, ಯಹೂದಿಗಳಲ್ಲಿ ಸಾರ್ವಕಾಲಿಕ ಶ್ರೇಷ್ಠ ಒಲಿಂಪಿಕ್ ಅಥ್ಲೀಟ್ ಎಂಬ ಹಿರಿಮೆಗೆ ಪಾತ್ರರಾದರು.

ದೀರ್ಘಾಯುಷ್ಯದ ಗುಟ್ಟೇನು ಅಜ್ಜಿ? – ಎಲ್ಲರೂ ಅವರ ಮುಂದೆ ಈ ಪ್ರಶ್ನೆಯನ್ನು ಇಡುವವರೇ. ಆಗ್ನೇಸಜ್ಜಿ ನೀಡುವ ಉತ್ತರ ತುಂಬಾ ಸರಳ: 'ಬದುಕನ್ನು ನಾನು ತುಂಬಾ ಪ್ರೀತಿಸುತ್ತೇನೆ. ಆರೋಗ್ಯದ ವಿಷಯವಾಗಿ ನನಗೆ ಅಷ್ಟೇ ಕಾಳಜಿ. ಆರೋಗ್ಯ ಇಲ್ಲದಿದ್ದರೆ ಬದುಕು ಎಲ್ಲಿರುತ್ತದೆ ಹೇಳಿ?'. ಜಿಮ್ನಾಸ್ಟಿಕ್ ಅಂದರೆ ಅವರಿಗೆ ಪಂಚಪ್ರಾಣ. 'ನಾನು ಗೆದ್ದಿರುವ ಹತ್ತು ಒಲಿಂಪಿಕ್ ಪದಕಗಳಿಗಿಂತ ಜಗತ್ತನ್ನು ಸುತ್ತಿದ ಅನುಭವದ ಲಾಭ ಇನ್ನೂ ದೊಡ್ಡದು. ಜಗತ್ತನ್ನು ಖರ್ಚಿಲ್ಲದೆ ಸುತ್ತಲು ಅವಕಾಶ ಮಾಡಿಕೊಟ್ಟ ಕಾರಣದಿಂದ ಜಿಮ್ನಾಸ್ಟಿಕ್ ಕ್ರೀಡೆ ನನ್ನ ಉಸಿರು' ಎನ್ನುತ್ತಾರೆ ಈ ಅಜ್ಜಿ.

ಇತ್ತ ಮೆಲ್ಬರ್ನ್ ಕೂಟದಲ್ಲಿ ಆಗ್ನೇಸ್ ಪದಕದ ಮೇಲೆ ಪದಕ ಗೆಲ್ಲುತ್ತಿರುವಾಗಲೇ ಅತ್ತ ಅವರ ತವರು ಹಂಗೇರಿಯ ಮೇಲೆ ಸೋವಿಯತ್ ರಷ್ಯಾ ಆಕ್ರಮಣ ಮಾಡಿತ್ತು. ವಿಪ್ಲವದ ಕಾಲದಲ್ಲಿ ಸ್ವದೇಶಕ್ಕೆ ಮರಳುವುದು ತುಂಬಾ ಅಪಾಯಕಾರಿ ಎಂಬುದನ್ನರಿತ ಆಗ್ನೇಸ್, ಒಲಿಂಪಿಕ್ ಕೂಟ ಮುಗಿದ ಬಳಿಕ ಆಸ್ಟ್ರೇಲಿಯದಲ್ಲಿಯೇ ನೆಲೆನಿಂತು, ಅಲ್ಲಿಯೇ ರಾಜಕೀಯ ಆಶ್ರಯ ಪಡೆದರು. ಬಳಿಕ ಇಸ್ರೇಲ್‌ಗೆ ವಲಸೆ ಹೋದ ಅವರು ಅಲ್ಲಿನ ಜಿಮ್ನಾಸ್ಟಿಕ್ ತಂಡಕ್ಕೆ ಕೋಚ್ ಆದರು. ಹೀಗಾಗಿ 60 ವರ್ಷಗಳ ಕಾಲ ಅವರು ತವರಿನಿಂದ ಹೊರಗೆ ಉಳಿದರು.

ಮೆಲ್ಬರ್ನ್ ಒಲಿಂಪಿಕ್ ಕೂಟಕ್ಕಾಗಿ 1956ರಲ್ಲಿ ಹಂಗೇರಿಯಿಂದ ಹೊರಟಿದ್ದ ಆಗ್ನೇಸ್, ತಿರುಗಿ ಸ್ವದೇಶಕ್ಕೆ ಮರಳಿದ್ದು 2015ರಲ್ಲಿ! ಹಂಗೇರಿ ರಾಜಧಾನಿ ಬುಡಾಪೆಸ್ಟ್‌ನಲ್ಲಿ ಈಗ ವಾಸ. ಇಸ್ರೇಲ್ ಹಾಗೂ ಹಂಗೇರಿ ರಾಷ್ಟ್ರಗಳ ಅತ್ಯುನ್ನತ ಸಾಂಸ್ಕೃತಿಕ, ಕ್ರೀಡಾ ಪುರಸ್ಕಾರಗಳಿಗೆ ಭಾಜನರಾಗಿರುವ ಅವರು, ಈಗಲೂ ಜಿಮ್ನಾಸ್ಟಿಕ್ ವರಸೆಗಳನ್ನು ತೋರಿಸುವುದಿದೆ. ಈ ಅಜ್ಜಿಗೆ ವೈದ್ಯರನ್ನು ಕಾಣುವ ಪ್ರಸಂಗ ತುಂಬಾ ಕ್ವಚಿತ್ ಆಗಿ ಎದುರಾಗಿದ್ದಿದೆ. ಹೌದು, ಆಗ್ನೇಸಜ್ಜಿ ಸಂಪರ್ಕಕ್ಕೆ ಬಂದವರಲ್ಲಿ ಮಂದಹಾಸ ಸಾಂಕ್ರಾಮಿಕದಂತೆ ಹರಡುತ್ತದೆ! ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65